ಇ ಸಿ ಎ ನಂ. 1/2019
ಪಿ ಡಬ್ಲ್ಯು 1
ದಿನಾಂಕ 14-10-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 1, 2 ಮತ್ತು 4 ನೇ ಎದುರುದಾರರ ಪರಃ ಶ್ರೀಮತಿ ಡಿ ಸಿ ಆರ್ ವಕೀಲರಿಂದಃ

ನನ್ನ ಮಗ 1, 2 ಮತ್ತು 4 ನೇ ಎದುರುದಾರರ ಬಳಿ ಕೆಲಸ ಮಾಡುತ್ತಿದ್ದ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. ಅಂತಹ ಯಾವುದೇ ದಾಖಲೆಗಳನ್ನು ಹಾಜರುಪಡಿಸದೆ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನ ತಪ್ಪಿನಿಂದಲೇ ಅಪಘಾತವಾಗಿರುವುದರಿಂದ 1, 2 ಮತ್ತು 4 ನೇ ಎದುರುದಾರರು ನನಗೆ ಪರಿಹಾರ ನೀಡಲು ಯಾವುದೇ ಬಾದ್ಯಸ್ಥಿಕೆ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಮಾಸಿಕ 9 ಸಾವಿರ ರೂ ದುಡಿಯುತ್ತಿದ್ದ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಮನೆಯ ಬಳಿ ಸಂಬಳ ಕೊಡುತ್ತಿದ್ದರು, ಆ ಬಗ್ಗೆ ದಾಖಲೆ ಇರುವುದಿಲ್ಲ ಎಂದು ನುಡಿದಿರುತ್ತಾರೆ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರದನ್ಯಾದಂ., ಕಡೂರು.**